ಶ್ರೀ ಟಿ. ಎಂ ಮಂಜುನಾಥ್.—ನಾನು ಹೇಳಲಿಲ್ಲ. ಅಲ್ಲಿರತಕ್ಕಂಥ ಹೆಣ್ಣು ಮಕ್ಕಳೇ ಹೇಳಿದ್ದು.

ಶ್ರೀ ಹೆಚ್. ಡಿ. ದೇವೇಗೌಡ.—ಅದರಲ್ಲೂ ಈ ಸಭಾನಾಯಕರಿಗೆ ಹೇಳುತ್ತೇನೆ. ಇಂಥಾ ವಿಷಯಗಳನ್ನು ಆದಷ್ಟು ಮಟ್ಟಿಗೆ ಜಾಗ್ರತೆ ಡಿಸ್ಪೋಸಲ್ ಮಾಡುವುದು ಒಳ್ಳೆಯದು. ಈ ಬಗ್ಗೆ ಕಾಲ್ ಅಟೆನ್‌ಷನ್ ಇದೆ. ನಿಯಮಾವಳಿ ಪ್ರಕಾರ ೧–೨ ತೆಗೆದುಕೊಳ್ಳಬಹುದು. ಸಾಧ್ಯವಾದಷ್ಟು ಮಟ್ಟಿಗೆ ಜಾಗ್ರತೆ ಡಿಸ್‌ಪೋಸ್ ಮಾಡಿದರೆ ಸದಸ್ಯರಿಗೂ ಇಷ್ಟು ಕಾತುರತೆ ಇರುವುದಿಲ್ಲ ಮತ್ತು ಅವರಿಗೆ ಮಾತನಾಡಲೂ ಅವಕಾಶ ಇರುವುದಿಲ್ಲಾ ಎಂದು ನನ್ನ ಪ್ರಾರ್ಥನೆ.

2–30 P.M.

ಶ್ರೀ ವಾಟಾಳ್ ನಾಗರಾಜ್.—ಆತುರದಿಂದ ಇವತ್ತೇ ಹೇಳಬೇಕೆಂದು ಒತ್ತಾಯವಿಲ್ಲ ಪ್ರಸಂಗ ನಡೆದು ಎರಡು ತಿಂಗಳಾಗಿದೆ. ಯಾತಕ್ಕೆ ಈ ಪ್ರಸಂಗ ತಂದೆವು ಎಂದರೆ ಯಾವ ಅಧಿಕಾರಿಯಮೇಲೆ ಆರೋಪಣೆ ಮಾಡಿರುತ್ತಾರೆ, ಯಾವ ಅಧಿಕಾರಿಗಳ ವಿರುದ್ಧ ತಮ್ಮಲ್ಲಿ ನಿಯೋಗ ಬಂತು ಅವೇ ಅಧಿಕಾರಿಯನ್ನು ಬೇರೆ ಕಡೆ ವರ್ಗಮಾಡಿ ಒಳ್ಳೆಯಕಡೆ ಇಟ್ಟಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಒಂದುಕಡೆಯಿಂದ ತೆಗೆದು ಇನ್ನೊಂದು ಕಡೆ ಹಾಕುತ್ತಾರೆ. ಏಕೆ ಆ ಅಧಿಕಾರಿಯನ್ನು ಅಲ್ಲಿ ಇಟ್ಟಿದ್ದೀರಿ ಎಂದರೆ ಅದು ಸರ್ಕಾರದ ಡಿಸ್ಕ್ರಿಷನ್‌ಗೆ ಬಿಟ್ಟಿದ್ದು. ಸುಮ್ಮನೆ ಮಾತನಾಡಿದರೆ ಏನು ಪ್ರಯೋಜನ ? ಈ ಪ್ರಸಂಗ ಎರಡು ತಿಂಗಳ ಹಿಂದೆ ನಡೆಯಿತು ಎಂದು ಹೇಳುತ್ತೀರಿ. ಅದು ೮-೧೦ ದಿವಸಗಳ ಈಚೆಗೆ ಗೊತ್ತಾದದ್ದು ಅಧಿಕಾರಿಗಳನ್ನು ಏಕೆ ಅಲ್ಲಿ ಇಡುತ್ತೀರಿ. ಇಲ್ಲಿ ಇಡುತ್ತೀರಿ. ಏನು ಮಾಡುತ್ತೀರಿ ಎಂದು ಪ್ರಶ್ನೆ ಹಾಕುತ್ತಾ ಹೋದರೆ ಸರ್ಕಾರ ಏನು ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್.—ತಾವು ಹಾಗೆ ಹೇಳಿದರೆ ನಾವು ಸಭೆಯಲ್ಲಿ ಇರುವುದು ಕಷ್ಟವಾಗುತ್ತದೆ. ನಾವು ಮಾತನಾಡುವುದು ಕಷ್ಟವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಕಾನೂನು ರೀತ್ಯ, ರೂಲ್ಸ್ ರೀತ್ಯ ನಡೆದುಕೊಂಡು ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್.—ನೀವು ನನ್ನನ್ನು ನೋಡಿದ್ದೀರಿ, ನನ್ನ ಮಾತನ್ನು ಕೇಳಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ನಾನು ಹೇಳುವುದು ಏನು ಎಂದರೆ ನಾವು ನೀವು ಸಭೆಯಲ್ಲಿ ಮಾತನಾಡುವುದಕ್ಕೂ ಹೊರಗಡೆ ಮಾತನಾಡುವುದಕ್ಕೂ ಬಹಳ ವ್ಯತ್ಯಾಸವಿದೆ.

MADAM SPEAKER:—The Hon'ble member was not attentive ಅಧಿಕಾರಿಗಳನ್ನು ಯಾವ ತರಹ ಶಿಕ್ಷಿಸಬೇಕು ಎನ್ನುವುದಕ್ಕೆ ಕಾನೂನು ಇದೆ. ಅದಾದಮೇಲೆ ಅವರು ಕೋರ್ಟಿಗೆ ಹೋಗುತ್ತಾರೆ. ಆದುದರಿಂದ ಸರ್ಕಾರ ಹುಶಾರಾಗಿ ವರ್ತನೆ ಮಾಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಅದನ್ನು ಮಾನ್ಯ ಸದಸ್ಯರು ಗಮನಿಸಿಲ್ಲವೆಂದು ಕಾಣುತ್ತದೆ.

Activities of the Birlas in the State.

ಶ್ರೀ ಎಂ. ಎಸ್ ಕೃಷ್ಣನ್.—ಬಿರ್ಲಾ ಮತ್ತು ಅವರ ಏಜೆಂಟ್‌ಗಳ ಚಟುವಟಿಕೆಗಳ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೆ. ಅದು ಬಹಳ ಗಂಭೀರವಾದ ಪ್ರಶ್ನೆ. ನಮ್ಮ ರಾಜ್ಯದಲ್ಲಿ ಬೆಂಗಳೂರಂ ನಗರದಲ್ಲಿ ಯಾವರೀತಿ ಇದೆ ಎಂಬುವನ್ನು ಸೂಕ್ಷ್ಮವಾಗಿ ಬರೆದು ಕಳುಹಿಸಿದ್ದೆ ನನಗೆ ಹಲವಾರು ತಿಂಗಳುಗಳಿಂದ ಇದರ ಬಗ್ಗೆ ವರದಿಗಳು ಬರುತ್ತಾ ಇವೆ ವರದಿಗಳು ಏನು ಎಂದರೆ ಬಿರ್ಲಾರವರ ಏಜೆಂಟ್ ಒಬ್ಬರು ಮಹಾನುಭಾವರು ಇದ್ದಾರೆ, ಕೆಲವು ಸಮಯ ಲಾಬಿಗೆ ಬರುತ್ತಾರೆ. ಇವೊತ್ತಿನದಿವಸ ಏನಾಗಿದೆ ನನಗೆ ತಿಳಿದಮಟ್ಟಿಗೆ ಅವರ ಮೋಡಸ್ ಆಪರೆಂಡಿ ಯಾವರೀತಿ ಇದೆ ಎಂದರೆ ಕೆಲವು ಮಂತ್ರಿಗಳಿಗೆ ಮತ್ತು ಅನೇಕ ಅಧಿಕಾರಿಗಳಿಗೆ ಟೀ ಪಾರ್ಟಿಗಳನ್ನು ಕೊಟ್ಟು ಅವರಿಗೆ ಅನುಕೂಲ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಶೋಕ ಹೋಟೆಲ್ ಮತ್ತು ಹೋಟೆಲ್ ಇಂಟರ್‌ನ್ಯಾಷನಲ್‌ನಲ್ಲಿ ಪ್ರೈವೇಟ್ ಟೀ ಪಾರ್ಟಿಸ್ ಆರೆಂಜ್ ಮಾಡುತ್ತಾರೆ. ಪಬ್ಲಿಕ್ ಆಗಿ ಕರೆದು ಟೀ ಪಾರ್ಟಿ ಮಾಡುವುದು ಒಂದು ರೀತಿ. ಪ್ರೈವೈಟ್ ಆಗಿ ಕರೆದು ರೂಮ್ ಬುಕ್ ಮಾಡಿ ಕೆಲವು ಮುಖ್ಯವಾದ ಗೊಡ್ಡದೊಡ್ಡ ಅಧಿಕಾರಿಗಳಿಗೆ ಅದರಲ್ಲೂ ಡಿಪಾರ್ಟ್‌ಮೆಂಟ್ ಕಾರ್ಯದರ್ಶಿಗಳನ್ನು ಕರೆದು ಟೀ ಪಾರ್ಟಿ ಕೊಡುತ್ತಾರೆ ಎಂಬು ನನಗೆ

(ಶ್ರೀ ಎಂ. ಎಸ್. ಕೃಷ್ಣನ್)

ಹೇಳಿದ್ದಾರೆ. ಈ ತರಹ ಪ್ರವೃತ್ತಿ ಇದೆ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಪ್ರತಿ ಮೂರು ನಾಲ್ಕು ದಿನಗಳಿಗೆ ಒಂದು ಸಾರಿ ಹೋಗಿ ಪಾನಕ ಪಾನೀಯಗಳನ್ನು ಸರಬರಾಜು ಮಾಡುತ್ತಾರೆ. ಎರಡನೆಯದು ಕೆಲವು ಮಂತ್ರಿಗಳುಕೂಡ ಇಂತಹ ಸಮಾರಂಭಗಳಿಗೆ ಹೋಗುತ್ತಾ ಇದ್ದಾರೆ ಎಂಡು ತಿಳಿದುಬಂದಿದೆ. ಇದರಿಂದ ಉದ್ಭವವಾಗುವುದು ಏನು ಎಂದರೆ ಮಂತ್ರಿಗಳು ಯಾವರೀತಿ ನಡೆದುಕೊಳ್ಳಬೇಕು ಅಧಿಕಾರಿಗಳು ಯಾವರೀತಿ ನಡೆದುಕೊಳ್ಳಬೇಕು ಎಂಬ ಪ್ರಶ್ನೆ ಬರುತ್ತದೆ. ನನಗೆ ತಿಳಿದಮಟ್ಟಿಗೆ ಬಹಳ ಹತ್ತಿರದ ನಮ್ಮ ಸ್ನೇಹಿತರು ಹೇಳಿದರಂತೆ ಇಪತ್ತಿನ ದಿವಸ ಎ.ಐ.ಸಿ.ಸಿ ಸೆಷನ್‌ಗೆ ಹೋಗಿದ್ದಾಗ್ಯೆ ಮಾನ್ಯ ಮುಖ್ಯಮಂತ್ರಿಗಳು ಬಿರ್ಲಾರವರ ಗೆಸ್ಟ್ ಹೌಸಿನಲ್ಲಿ ಇದ್ದರು. ಬಾಂಬೆಗೆ ಬಂದಾಗ ಬಿರ್ಲಾರವರು ಟೀ ಪಾರ್ಟಿ ಕೊಟ್ಟರು ಅದನ್ನು ಕೆಲವು ಮಂತ್ರಿಗಳು ವಿರೋಧಿಸಿದರೆಂದು ಹೇಳಿದರು, ಅದನ್ನು ನಂಬಲಿಕ್ಕೆ ನನಗೆ ಸಾಧ್ಯವಾಗಲಿಲ್ಲ, ಅದು ನಿಜವೋ ಅಥವಾ ಸುಳ್ಳೋ ಅವರಿಗೆ ಬಿಟ್ಟಿದ್ದೇನೆ. ಅನೇಕ ಕೈಗಾರಿಕೋದ್ಯಮಿಗಳು ಟೀ ಪಾರ್ಟಿಗೆ ಕರೆಯುತ್ತಾರೆ ಆ ರೀತಿ ಮಂತ್ರಿಗಳು ಹೋಗುವುದು ಉಂಟು, ಹೋದಾಕ್ಷಣಕ್ಕೆ ಬಿರ್ಲಾ ಏಜೆಂಟ್ ಆಗುತ್ತಾರೆ, ಟಾಟಾ ಏಜೆಂಟ್ ಆಗುತ್ತಾರೆ ಎಂದು ಮಸಿ ಬಳಿಯುವುದಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿಗಳಾಗಲಿ ರಾಜ್ಯ ಮಂತ್ರಿಗಳಾಗಲಿ ಇಂತಹ ವಿಷಯಗಳಲ್ಲಿ ಬಿರ್ಲಾ ಮತ್ತು ಟಾಟಾಗಳು ಯಾರು ಮಾನಪಲಿಸ್ಟ್ ಎಂದು ಹೇಳುತ್ತೇವೆ ಅವರು ಯಾವರೀತಿ ದೇಶದಲ್ಲಿ ನಡೆದುಕೊಳ್ಳುತ್ತಾರೋ ಎನ್ನುವ ಅನೇಕ ವಿದ್ಯಮಾನಗಳಿಂದ ಗೊತ್ತಾಗಿದೆ. ಪಾರ್ಲಿಮೆಂಟಿನಲ್ಲಿ ಕೂಡ ಚರ್ಚೆಯಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಇವರು ಏನೇನೋ ಕೇಳಿಬಿಟ್ಟಿದ್ದಾರೆ, ಅದರ ಮೇಲೆ he goes on concluding on such matters ನಿಜಾಂಶ ಇದ್ದರೆ ಕಂಕ್ಲೂಡ್ ಮಾಡಲಿ. ಆದರೆ ಈಗ ಅವರು ಹೇಳುತ್ತಿರುವುದರಲ್ಲಿ ವಿಷಯ ಅವರಿಗೆ ಸರಿಯಾಗಿ ಗೊತ್ತಾಗದೆ ಅವರು ಹೇಳಿದ್ದಾರೆ. ಹೀಗೆ ಹೇಳುವುದರಿಂದ ಅದರ ಪರಿಣಾಮ ದೇಶಕ್ಕೆ ಅನಾಹುತವಾಗುತ್ತದೆ. ಆದ್ದರಿಂದ ಈ ತರಹ ಕಂಕ್ಲೂಷನ್‌ಗೆ ಏತಕ್ಕೆ ಬರುತ್ತಾರೋ ಗೊತ್ತಾಗುವುದಿಲ್ಲ.

Why not the hon. member ask us straight ? Why does he not have the patience to know from the Government what are the factors involves in this? If it is proved to be a fact, he can draw conclusion of his own.

ಬೇಕಾದರೆ ಬೇರೆ ಸಂದರ್ಭದಲ್ಲಿ ಏನು ಹೇಳಬೇಕೋ ಹೇಳಲಿ.

ಶ್ರೀ ಎಂ. ಎಸ್ ಕೃಷ್ಣನ್.—ಈ ರೀತಿ ನಡೆದುಕೊಳ್ಳಕೂಡದು, ಇದರಿಂದ ಇನ್‌ಫ್ಲ್ಯೂಯೆನ್ಸ್ ಆಗುತ್ತದೆಯೆಂದು ತಿಳಿದುಬಂದಿದೆ. ಇನ್‌ಫ್ಲ್ಯೂಯೆನ್ಸ್ ಯಾವರೀತಿ ಆಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮಗೆ ತಿಳಿದುಬಂದಿರುವ ಹಾಗೆ ಇಪ್ಪತ್ತನೆದಿವಸ ಅಮ್ಮಸಂದ್ರದ ಬಿರ್ಲಾ ಕಾರ್ಖಾನೆಗೆ ಎರ್‌ಸ್ಟ್ರಿಪ್‌ಗೋಸ್ಕರ ೩ ೦ ಎಕರೆ ಜಮೀನು ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಭೂಸುಧಾರಣೆ ವಿಷಯ ಮಾತನಾಡುತ್ತೇವೆ, ಒಂದುಕಡೆ ಹೊಲ ಇಲ್ಲದವರಿಗೆ ಹೊಲ ಕೊಡುತ್ತೇವೆ, ಜಮೀನು ಇಲ್ಲದವರಿಗೆ ಜಮೀನು ಕೊಡಬೇಕು ಎಂದು ಹೇಳುತ್ತೇವೆ.

SRI D. DEVARAJA URS.—These are irrelevant matters. What is the subject matter of Call Attention Motion ?

SRI M. S. KRISHNAN—Why should the Hon Minister be impatient? I don't expect the Chief Minister to be impatient.

SRI D. DEVARAJA URS.—I am impatient because the time of the House is not being utilised for the purpose for which it is meant. I am zealous to guard the time of the House.

SRI M. S. KRISHNANAN.—Every Member has the right to raise an issue which he feels is important from the point of view of the State. Let me say that what they are doing is not correct. Let an enquiry be conducted.

SRI D. DEVARAJ URS.—This opportunity should not be made use of to give a lengthy sermon here. If he wants to raise a particular motion, let him raise. We will reply for the Motion. Let him read the Motion.

SRI M. S. KRISHNAN.—I have given in writing four days back.

SRI D. DEVARAJA URS.—We know what is contained therein.

ಶ್ರೀ ವಾಟಾಳ್ ನಾಗರಾಜ್.— 300 ಎಕರೆ ಜಮೀನು ಕೊಟ್ಟಿದ್ದೀರಿ, ನಾವು ಸಮತಾವಾದ ಹೇಳ ತಕ್ಕವರು, ಭಾರಿ ಭಾರಿ ಬಂಡವಾಳಗಾರರಿಗೆ ಸರ್ಕಾರ ಬೆಂಬಲ ಕೊಡುತ್ತಾ ಇದ್ದೀರಿ ಎಂದು ಅವರು ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡಿದ್ದಾರೆ. ತಾವು ಏತಕ್ಕೆ ಕೋಪ ಮಾಡಬೇಕು ?

SRI D. DEVARAJ URS.— Let him not misunderstand. Is it 2½ hours discussion that we are having ?

ಇದಕ್ಕೋಸ್ಕರ ಎಷ್ಟು ಕಾಲ ಕಳೆಯಬೇಕಾಗುತ್ತದೆ ?

ಶ್ರೀ ಎಂ ಎಸ್ ಕೃಷ್ಣನ್.— ನಾನು ಎರಡು ನಿಮಿಷಗಳೂ ಮಾತನಾಡಲಿಲ್ಲ.....

MADAM SPEAKER.... The hon. Member has already spoken for 10 minutes.

SRI S. M. SHEERNALI CHANDRASHEKAR — On a Point of Order. When the subject is not on the agenda, how can Mr. Krishnan speak on it ?

SRI M. S. KRISHNA.— The Hon. Member speaks without knowing. I have given a notice.

MADAM SPEAKER.— I have permitted him.

ಶ್ರೀ ಎಂ ಎಸ್ ಕೃಷ್ಣನ್.— ಚರ್ಚೆಯನ್ನು ಬೆಳೆಸಬೇಕು ಎನ್ನುವ ಅಭಿಪ್ರಾಯ ನನಗೆ ಇಲ್ಲ. ಪರಿಸ್ಥಿತಿ ಈ ತರಹ ಇದೆ. ಇನ್ನೊಂದು ನಿದರ್ಶನ ತಮಗೆ ಹೇಳಬೇಕು. ಏರ್ ಪಲ್ಯೂಷನ್ ಬಗ್ಗೆ ಆಲ್ಲಿ ಇರುವ ರೈತರಿಗೆ ಮೈಸೂರು ಸಿಮೆಂಟ್ ಕಂಪನಿಯಿಂದ ಬಹಳ ಅನಾಹುತವಾಗುತ್ತಿದೆ. ಎಂದು ಬರೆದಿದ್ದಾರೆ. ಅಧಿಕಾರಿಗಳಿಗೂ ಬರೆದಿದ್ದಾರೆ ಏನು ಆಗಿಲ್ಲ. ರಿಯಾಯಿತಿ ಒಂದೊಂದಕ್ಕೂ ಕೊಡುತ್ತಿದ್ದಾರೆ ಎಂದು ತಿಳಿದಿದ್ದಾರೆ. ಇದರಬಗ್ಗೆ ವಿಚಾರಣೆ ನಡೆಸಬೇಕು, ಯಾರು ಯಾರು ಇದರ ಹಿಂದೆ ಇದ್ದಾರೆ ಯಾವ ರೀತಿ ನಡೆದುಕೊಳ್ಳುತ್ತಾರೆ, ಯಾವ ಅಧಿಕಾರಿ ಇದ್ದಾರೆ. ವಿಚಾರಣೆ ನಡೆಸಿ ಸರಿಯಾದ ಕೋಡ್ ಆಫ್ ಕಾಂಡಕ್ಟ್ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಇರಬೇಕು. ವಿನಾಕಾರಣ ರಿಯಾಯಿತಿ ಕೊಡಕೂಡದು. Because they are monopolists you have got to be doubly careful. ಏಜೆಂಟ್ ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಯಾವರೀತಿ ಹಣ ಬರುತ್ತವೆ, ಎಲ್ಲಿಂದ ಬರುತ್ತದೆ, ಹೇಗೆ ಕೊಡುತ್ತಾರೆ ಯಾವರೀತಿ ನಡೆದುಕೊಳ್ಳುತ್ತಾರೆ ಎಂಬುದನ್ನು ಕಂಡುಹಿಡಿದು ನಿಮ್ಮಲ್ಲಿ ಸಿ.ಐ.ಡಿ. ಇದ್ದಾರೆ, ಅವರು ನೋಡಲಿ.

ಶ್ರೀ ವಾಟಾಳ್ ನಾಗರಾಜ್.— ಸಚಿವರ ಬಗ್ಗೆ ಕೋಡ್ ಆಫ್ ಕಾಂಡಕ್ಟ್ ಮಾಡುತ್ತೇವೆಂದು ಹೇಳಿ 7-8 ತಿಂಗಳಾಯಿತು. ಅದು ಯಾವಾಗ ಬರುತ್ತದೆ ?

† ಶ್ರೀ ಡಿ ದೇವರಾಜ್ ಅರಸ್,— ಮಾನ್ಯ ಅಧ್ಯಕ್ಷರೇ, ಈ ಕಾಲ್ ಅಟೆನ್‌ಷನ್ ಮೋಷನ್ ನಲ್ಲಿರುವ ಪ್ರಕಾರ ಓದಿದರೆ ತಾವು ಸ್ವಲ್ಪ ಟೈಂ ಕೊಡಬೇಕು ರಿಪೋರ್ಟ್ ಏನು ಬರೆದಿದ್ದಾರೆ ಎಂದು ತಿಳಿದುಕೊಂಡು ಹೇಳಬೇಕಾಗುತ್ತದೆ. ಇದರಲ್ಲಿರುವ ಪ್ರಕಾರ

"recently there are reports of increasing activities of Birla in our State. . . . Birla lobby is very active in the State".

(ಶ್ರೀ ಡಿ. ದೇವರಾಜ ಅರಸ್)

ಎಂದು ಹೇಳಿದ್ದಾರೆ. ಬಿರ್ಲಾ ಲಾಬಿ ಎಂದು ಏನು ಅವರು ಹೇಳಿದರು ಅದು ಏನು ಲಾಬಿಯೋ ನನಗೆ ಗೊತ್ತಿಲ್ಲ. ಪಾರ್ಲಿಮೆಂಟ್ ಲಾಬಿ ವಿಚಾರ ಬರುತ್ತದೆ. ಅನೇಕ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅಲ್ಲಿ ಇದನ್ನು ಎತ್ತಿದ್ದಾರೆ. ಅಲ್ಲಿ ಆಗಾಗ ಸಿ ಐ ಎ ಏಜೆಂಟ್ ಮತ್ತು ಲಾಬಿ ವಿಚಾರ ಬರಬಹುದು. ಅಲ್ಲಿ ಏನಾಯಿತೋ ಬಿಟ್ಟಿತೋ ಅದು ನಮಗೆ ಸಂಬಂಧಪಟ್ಟಿದ್ದಲ್ಲ. ಅಲ್ಲೂ ಕೂಡ ಅವರ ಪಕ್ಷದವರು ಏನು ಹೇಳಿದ್ದಾರೆ ಅದನ್ನು ಅಲ್ಲಿ ಇವರು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೋ ಏನೋ ಗೊತ್ತಿಲ್ಲ. ಒಂದು ವೇಳೆ ಸ್ಪೆಸಿಫಿಕ್ ಆಗಿ ಯಾವುದಾದರೂ ವಿಚಾರದಲ್ಲಿ ಬಿರ್ಲಾ ಗಾಗಲೀ. ಯಾರಿಗೆ ಆಗಲೀ ಔಟ್ ಆಫ್ ದಿ ವೇ ಹೋಗಿ ಸರ್ಕಾರ ಸಹಾಯ ಮಾಡಿದ್ದಾರೆ. ಅವರು ಪಾಲನ್ನು ಪಡೆದಿದ್ದಾರೆ ಎಂದು ತಿಳಿಸಿದ್ದರೆ, ಯಾವುದೇ ರೀತಿಯಲ್ಲಿ ತಿಳಿಸಲಿ, ಇಲ್ಲಿಯೇ ತಿಳಿಸಬೇಕು ಎಂದು ಹೇಳುವುದಿಲ್ಲ, ಕಾನೂನು ಪ್ರಕಾರ ಪ್ರಸ್ತಾಪ ಮಾಡಿ ಹೇಳಲಿ, ನಾನು ನನಗೆ ತಿಳಿದ ಹಾಗೆ ಹೇಳುತ್ತೇನೆ; ಅನುಮಾನದಿಂದ ಬಿರ್ಲಾ ಲಾಬಿ ಡೆವಲಪ್ ಆಗ.ತ್ತಾ ಇದೆ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಇದು ಯಾವುದು ಇಲ್ಲದೆ ಭಾಷಣ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.— ಗುತ್ತಲೆ ಎಂಬ ಒಬ್ಬರು ಟಾಲ್ ಮ್ಯಾನ್ ಬರುತ್ತಾರೆ, ಅವರು ಬಿರ್ಲಾ ಏಜೆಂಟರು ಅವರಿಗೆ ನಾಲ್ಕು ಸಾವಿರ ರೂಪಾಯಿ ಕೊಟ್ಟು ಇಟ್ಟಿದ್ದಾರೆ.

ಶ್ರೀ ಡಿ ದೇವರಾಜ ಅರಸ್.— ಇಟ್ಟುಕೊಂಡರೆ ತಪ್ಪು ?

ಶ್ರೀ ಎಂ ಎಸ್ ಕೃಷ್ಣನ್.— ಮಂತ್ರಿಗಳ ಜೊತೆಯಲ್ಲಿ ಭುಜದ ಮೇಲೆ ಭುಜ ಹಾಕಿಕೊಂಡು ಓಡಾಡುತ್ತಾರೆ.

ಒಬ್ಬ ಸದಸ್ಯರು.— ಸಿನಿಮಾದವರು ಬರಬಹುದು, ನಿಮ್ಮ ಹತ್ತಿರ. ಅವರ ಹತ್ತಿರ ಬಿರ್ಲಾ ಏಜೆಂಟ್ ಬಂದಿರಬಹುದು.

ಶ್ರೀ ವಾಟಾಳ್ ನಾಗರಾಜ್.— ಸಿನಿಮಾ ಏಜೆಂಟರು ಕೆ. ಕೆ. ಮೂರ್ತಿಯವರ ಹತ್ತಿರ ಬರ ಬಹುದಂ.

ಶ್ರೀ ಡಿ ದೇವರಾಜ್ ಅರಸ್.— ನಿಮ್ಮ ಹತ್ತಿರ ಯಾವುದೋ ಕಡೆಯಿಂದ, ಜಯಲಲಿತ ಕಡೆಯಿಂದ ಬರುತ್ತಾರೋ ಎನೋ ನನಗೆ ಏನು ಗೊತ್ತು ?

SRI M S. KRISHNAN.— While you said that, he (Vatal Nagaraj) is blushing.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಕೃಷ್ಣನ್ ಅವರು ಎಲ್ಲರಗಿಂತ ಜಾಸ್ತಿ ನಗುತ್ತಾರೆ ಅವರಿಗೆ ಇಂಥ ವಿಷಯಗಳೇ ಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್ :— ಈ ಬಿರ್ಲಾ ಲಾಬಿ ಏನು ಎಂಬುದು ಅರ್ಥವಾಗುವುದಿಲ್ಲ. ಇಂಥ ಲಾಬಿ ಇರುವುದಕ್ಕೆ ಕಾರಣ ಇಲ್ಲ. ಬಿರ್ಲಾ ಅವರು ಇಂಡಸ್ಟ್ರೀಸ್‌ಗಳನ್ನು ಇಟ್ಟಿದ್ದಾರೆ. ಅವರು ಲೆಜಿಟ್‌ಮೇಟ್ ಇಂಡಸ್ಟ್ರೀಸ್ ನಡೆಸಲು ಇಲ್ಲಿಗೆ ಬರುವುದಾದರೆ, ಇದು ತಪ್ಪು ಎಂದು ಯಾರೂ ಹೇಳುವು ದಕ್ಕೆ ಆಗುವುದಿಲ್ಲ. ಒಂದು ಕಡೆ ನಮ್ಮ ದೇಶದಲ್ಲಿ ಇರತಕ್ಕ ಇಂಡಸ್ಟ್ರೀಸ್ ಡೆವಲಪ್ ಆಗ ಬೇಕು, ಎಂದು ಹೇಳುತ್ತೇವೆ. ಇಂಡಸ್ಟ್ರೀಸ್ ಡೆವಲಪ್ ಆಗಬೇಕು ಎನ್ನುವುದು ನಿರ್ವಿವಾದವಾದ ಮಾತು. ಬಿರ್ಲಾ ಅವರು ಲೈಸೆನ್ಸ್ ತೆಗೆದುಕೊಂಡು ಇಂಡಸ್ಟ್ರೀಸ್ ನಡೆಸತಕ್ಕಂಥವರು ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಡುತ್ತಾರೆ. ಅಗತ್ಯ ಬಿದ್ದು ನಮ್ಮ ರಾಜ್ಯದೊಳಗೆ ಇಂಡಸ್ಟ್ರೀಸ್ ನಡೆಯಬೇಕು ಎಂದು ಇದ್ದಾಗ ದಕ್ಷರಾದಂಥಾಗುತ್ತಲೇ ಅವರು ತಥವಾ ಇನ್ನೊಬ್ಬರು ಅಧಿಕಾರಿಗಳು ಯಾರನ್ನಾದರೂ ಅವರು ನೇಮಿಸಿದ್ದರೆ ಅವರು ಇಲ್ಲಿಗೆ ಬಂದೇ ಬರುತ್ತಾರೆ. ಅವರು ಬೆಂಗಳೂರಿಗೆ ಬರಬಾರದು ಎಂದು ಕಟ್ಟಪ್ಪಣೆ ಮಾಡೋಣವೇ ? ಬಿರ್ಲಾ ಕಡೆಯವರು ಬರಲೇ ಬಾರದು ಎಂದು ಅವರನ್ನು ದೇಶ ಬ್ರಷ್ಟ ಮಾಡೋಣವೇ ? ಅವರು ನಮ್ಮ ಮೇಲೆ, ಸರ್ಕಾರದ ಮೇಲೆ ಯಾವುದಾದರೂ, ಕಾನೂನಿಗೆ ವಿರುದ್ಧವಾಗಿ ಪ್ರಭಾವವನ್ನು ಬೀರಿ ಕೆಲಸ ಮಾಡಿಕೊಳ್ಳುತ್ತಾ ಇದ್ದರೆ ಸ್ಪೆಸಿಫಿಕ್ ಆಗಿ ಹೇಳಲಿ, ತಪ್ಪು ಇದ್ದರೆ ನಮ್ಮದು ತಪ್ಪು ಎಂದು ಒಪ್ಪಿಕೊಳ್ಳೋಣ ಇಲ್ಲದಿದ್ದರೆ, ನೀವು ಹೇಳುವುದು ಸರಿಯಲ್ಲ ಎಂದು ಹೇಳೋಣ. ಬರೀ ಉಪಾಪೋಹಗಳ ಮೇಲೆ ಬಿರ್ಲಾ ಬರುತ್ತಾರೆ, ಅವರ ಜೊತೆ ಮ್ಯಾನೇಜರ್ ಇದ್ದಾರೆ ಎಂದರೆ, ಅವರ ಕಡೆಯ ಇಂಡಸ್ಟ್ರೀಸ್ ಇದೆ ಅದಕ್ಕೆ ಅವರು ಬರುತ್ತಾರೆ, ಅದಕ್ಕೆ ನಾನು ಏನು ಮಾಡಬೇಕರಿ ? ಅಧ್ಯಕ್ಷರೇ, ಶ್ರೀಮಾನ್ ಕೃಷ್ಣನ್ ಅವರು ಇದನ್ನು ಹೇಳಿದಾಗ ನನಗೆ ಹಿಂದೆ ಒಂದು ಸಾರಿ ನಡೆದ ಘಟನೆ ಜ್ಞಾಪಕಕ್ಕೆ ಬರುತ್ತದೆ. ನಂಬೂಂದ್ರಿಪಾದ್ ಅವರು ಕೇರಳದಲ್ಲಿ ಮುಖ್ಯಮಂತ್ರಿ ಯಾಗಿದ್ದಾಗ ಅವರು ಒಂದು ಓಷನ್ ಸ್ಟೇಟ್‌ಮೆಂಟ್ ಕೊಟ್ಟರು. ಏನೆಂದರೆ, "I am welcoming Birla to come to Kerala and start Industries" ಎಂದು.

SRI M.S. KRISHNAN : I am not saying that the hon.Minister should not have Industries. Why does he try to distort what I am saying that Birla should not come and start Industries, that is not my point.

ಶ್ರೀ ಡಿ. ದೇವರಾಜ ಅರಸ್ :– ಇವರು ಲಾಬಿ ಎಂದು ಹೇಳಿದರು, ಅಧಿಕಾರಿಗಳನ್ನು ಎಂಟಿರೆಟೇನ್ ಮಾಡುತ್ತಾರೆ. ಆದ್ದರಿಂದ ಅವರ ಇನ್‌ಫ್ಲ್ಯುಯನ್ಸ್‌ಗೆ ಒಳಗಾಗಿರಬಹುದು ಎಂದು ಹೇಳಿದರು. ಅಧಿಕಾರಿಗಳಿಗೆ ಕೋಡ್ ಆಫ್ ಕಾಂಡಕ್ಟ್ ಇದೆ. Whether it is Secretary or otherwise ಒಂದು ವೇಳೆ ಕೋಡ್ ಆಫ್ ಕಾಂಡಕ್ಟ ಪ್ರಕಾರ ನಡೆಯದೇ ಬೇರೆ ಕಡೆಗೆ ಇವರ ವಿಜಿಟ್ಸ್ ಜೊತೆಗೆ ಹೋಗುತ್ತಾರೆ ಎಂದರೆ ಇವರು ಬರೆಯುವ ಫೈಲಿನಲ್ಲಿ ಏನು ಮಾಡುತ್ತಾರೆ ಎಂದು ಗೊತ್ತಾಗುತ್ತದೆ.

ಅವನು ಹೇಳುವ ಪ್ರಕಾರ ವಿಜಿಟಾಗಿ ಅವರ ಕಡೆಗೆ ಹೋಗಿ, ಇವರು ಸಹಾಯ ಮಾಡಿದ್ದಾರೆ ಎನ್ನುವುದು ನನ್ನ ದೃಷ್ಟಿಗೆ ಬರಲಿಲ್ಲ, ಅದನ್ನು ನೋಡಿಸುವುದು ಒಳ್ಳೆಯದು ಎಂದು ಹೇಳಿದ್ದಾರೆ ಆಗಲೀ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ.– ಅಶೋಕ ಹೋಟೆಲಿನಲ್ಲಿ ಬಿಲ್ ತರಿಸಿ ನೋಡಿ ?

ಶ್ರೀ ಡಿ. ದೇವರಾಜ ಅರಸ್.– ದುಡ್ಡು ಇರುವವರು ಅಲ್ಲಿಗೆ ಹೋಗುತ್ತಾರೆ. ಅದಕ್ಕೆ ಏನು ಮಾಡೋಣ ?

ಶ್ರೀ ಪಾಟಾಳ್ ನಾಗರಾಜ್.- ಯಾರು ಪಾರ್ಟೀಸ್ ಎಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್. ಇನ್ನೊಬ್ಬರ ವಿಚಾರ ಹೇಳುವಾಗ, ನಿಧಾನವಾಗಿ ಯೋಚನೆ ಮಾಡಿ ಹೇಳಿ. ಅಶೋಕ ಹೋಟೆಲಿನಲ್ಲಿ ಗುತ್ತೆಲ್‌ರವರು ಅಥವಾ ಇನ್ನೊಬ್ಬರು ಹೋಗಿದ್ದಾರೆ ಬಿಲ್ ಕೊಟ್ಟಿದ್ದಾರೆ ಎಂದು ಹೇಳಿದರೂ, ಬಿಲ್ ಕೊಡದೆ ಹೋಗುತ್ತಾರೆಯೇ ? ಅದನ್ನು ನೋಡಿ ಎಂದರೆ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.– ಅಶೋಕ ಹೋಟೆಲ್‌ನಲ್ಲಿ ಯಾರು ಯಾರು, ಯಾವಾಗ ಹೋಗಿದ್ದರು ಎನ್ನುವುದು ಗೊತ್ತಾಗುತ್ತದೆ.

SRI D. DEVARAJA URS :– How can anybody prevent it? ಅಶೋಕ ಹೋಟೆಲ್ ಸಾರ್ವಜನಿಕರ ಹೋಟೆಲ್ ಯಾರಾದರೂ ಹೋಗಬಹುದು, ನೀವೂ ಹೋಗಬಹುದು. ಊಹೆ ಮೇಲೆ ಮಾತನಾಡಬಾರದು. ಬೆಂಗಳೂರು ವಾತಾವರಣ ಹೇಗೆ ಇದೆ ಎಂದರೆ, ಇಲ್ಲ ಗಾಸಿಪ್‌ಗೆ ಒಳ್ಳೆಯ ಅನುಕೂಲವಾದ ವಾತಾವರಣ ಇದೆ,

ನಿಮಗೆ ವಿಚಾರಗಳು ಸರಿಯಾಗಿ ಗೊತ್ತಿದ್ದರೆ ತಿಳಿಸಿ, ಎನ್‌ಕ್ವೈರಿ ಮಾಡೋತ್ತೇನೆ.

ಇನ್ನೊಂದು ಎನಂದರೆ ಬಿರ್ಲಾರವರಿಗೆ ಸಂಬಂಧಪಟ್ಟ ಹಾಗೆ ಅನೇಕ ಕೈಗಾರಿಕೆಗಳು ಇಲ್ಲವೆ, ಎಂಬುದು. I want Birlas also to come in the legitimate way to establish industries; not only Birlas but many more to come and establish industries in our State.

ಅದನ್ನು ಬೇಡವೆಂದು ತಾವು ಹೇಳುವಿರಾ ? ಇಲ್ಲ. ಸರಿ, ಮಾಡಿದರು. ಮನಾಪಲಿ ಎಂದು ಹೇಳಿದ್ದಾರೆ, ಯಾವ ಲೈಸೆನ್ಸ್ ಕೊಡಬೇಕು ಯಾವುದು ಕೊಡಬಾರದು ಎಂಬುದು ಇಂಡಿಯಾ ಸರಕಾರಕ್ಕೆ ಗೊತ್ತಿದೆ. ಅವರು ಯಾವುದನ್ನು ಯಾರಿಗೆ ಕೊಡಬಹುದೋ ನೋಡಿ ಕೊಡುವರು.

ಆಮೇಲೆ "Agent of the Birla's is hosting every day a party in Hotel Ashoka which is attended by top officers of the Government." ಎಂದು ತೀಳಿಸಿದ್ದಾರೆ. It has not come to my notice. If officers go there occasionally, I cannot help.

ಉದ್ದೇಶಪೂರ್ವಕವಾಗಿ ಇದ್ದರೆ, ಪ್ರಭಾವಕ್ಕೆ ಅಧಿಕಾರಿಗಳು ಒಳಗಾಗುತ್ತಿದ್ದಾರೆ ಎಂದು ಹೇಳುವುದಾದರೆ ನಾನು ವಿಚಾರಮಾಡುತ್ತೇನೆ, ನಂತರ

(SRI D. DEVARAJ URS)

"Some of the Ministers also" it appears, are attending these parties" ಎಂದು ಹೇಳಿದ್ದಾರೆ I do not know which minister has attended the party. I have no occasion to attended a party hosted by Birlas.

ಯಾರೇ ಆಗಲಿ ಹಾಗೆ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ. ಮಂತ್ರಿಗಳು ಹೋಗಿರಬಹುದಂ ಪ್ರೈವೇಟಾಗಿ ಯಾರಾದರೂ ಸ್ನೇಹಿತರು ಕರೆದುಕೊಂಡು ಹೋಗಿರಬಹುದು. ಬಿರ್ಲಾ ಕಡೆಯವರಂ ಬಂದು ಕರೆದುಕೊಂಡು ಹೋದರಂ ಎಂದು ಹೇಳುವುದಾದರೆ ನಾನು ವಿಚಾರಮಾಡಬೇಕಾಗುತ್ತದೆ. ಆಮೇಲೆ

"Besides it is learnt that the Chief Minister stayed in Birl's guest house in Ahemedabad when he went to participate in the A. I. C. C. meeting." ಎಂದು ತಿಳಿಸಿದ್ದಾರೆ.

I do not know who told him. If my own partman has stated it, I can only say that he is a big coward, whoever he is. Otherwise he should have stated it to me or raised in my party meeting. Surreptitiously if he has said it to somebody, I call him a big coward.

ನಿಜಾಂಶವೇನು ಎಂಬುದನ್ನು ತಿಳಿದುಕೊಳ್ಳಬೇಕಂ. ಸರಕಾರಿ ಗೆಸ್ಟ್ ಹೌಸ್ ಇದ್ದರೆ ಅದಕ್ಕೆ ಹೋಗಿದ್ದೇವೆ. ಆದರೆ ಗಾಸಿಪ ವಿಚಾರ ಬೇಡ. ನಿವಂ ಲ್ಲಿ ಕೇಳಂವವರಂ ಜಾಸ್ತಿ ಇದ್ದಾರೆ, ನಮ್ಮಲ್ಲಿ ಕಡಿವೆಂ ಇದ್ದಾರೆ ಎಂದಂ ಹೇಳಬಹುದ್ದು. ಆಮೇಲೆ ಬೊಂಬಾಯಲ್ಲಿ ಪಾರ್ಟಿಕೊಟ್ಟಿದ್ದು. ಅಲ್ಲಿ ಕೊಟ್ಟಿರುವ ಪಾರ್ಟಿ ವಿಚಾರ ಕೂಡ ಶುದ್ಧ ಕಟ್ಟುಕಥೆ. ನಾನು ಅಟೆಂಡ್ ಮಾಡಿದೆ ಎಂದು ಹೇಳಿದರು. ಪಾರ್ಟಿ ಕೊಟ್ಟರೆ ಅಟೆಂಡ್ ಮಾಡುವುದಿಲ್ಲ ಎಂದು ಹೇಳುವುದಿಲ್ಲ ಬಿರ್ಲಾ ಹೌಸ್ ಇಲ್ಲಿದೆ ಎಂದು ಹೇಳಿದ್ದಾರೆ. ಎಲ್ಲಿದೆಯೋ ಗೊತ್ತಿಲ್ಲ. ಅಹಮದಾಬಾದಿಗೆ ಹೋದಾಗ ಸರಕಾರಿ ಗೆಸ್ಟ್ ಹೌಸ್‌ನಲ್ಲಿ ಇಳಿದಂ ಕೊಳ್ಳಲಂ ಜಾಗ ಎ.ಐ.ಸಿ.ಸಿ. ಏರ್ಪಾಡು ಮಾಡಿತ್ತು. ಅದರಲ್ಲಿದ್ದು ಬಂದೆವು. ನಾನಂ ಇದ್ದ ವಿಚಾರ ಹೇಳುತ್ತೇನೆ.

I am not trying to escape like this. It is not a fact. It is merely a fictitious imagination. ನಂತರ

"Because of this and due to the influence of Birlas, ministers and Government officers, it is learnt, a number of concessions have been given in different ways to Birlas." ಎಂದು ತಿಳಿಸಿದ್ದಾರೆ. It is again very very vague What are those number of concessions? He has illustrated one and that is, the Government have agreed to give 600 acres for constructing an aerodrome.

SRI M. S. KRISHNAN:—I have mentioned one or two.

SRI D. DEVARAJ URS:—There is nothing else except the one you just now mentioned.

ಏರ್‌ಸ್ಟ್ರಿಪ್ಪು ಏನಂ ಕೊಟ್ಟಿದ್ದಾರೋ ಇಲ್ಲವೇ ಗೊತ್ತಿಲ್ಲ. ಕೊಟ್ಟಿದ್ದಾರೆ ಎಂದರೆ ಮೆರಿಟ್ ಕನಸಿಡರ್ ಮಾಡಲೇ ಬೇಕಾಗುತ್ತದೆ. ಬಿರ್ಲಾರವರು ಕೇಳಿದರೆ ಕೊಡಬಾರದೆಂದಿಲ್ಲ. ಸೋಷಿಯಲಸಂ ಇರಂವ ದೇಶಗಳಲ್ಲಿ ಏರೋಡ್ರೊಮ್ಸ್, ಫ್ಯಾಕ್ಟರಿ, ರೈಲು ಮುಂತಾದ್ದಿಲ್ಲವೇ ಅವರು ಕೇಳಿದರೆ ಕೊಡಬಾರದು ಎಂಬುದು ನನ್ನ ಅಟಿಟ್ಯೂಡ್ ಅಲ್ಲ, ಆ ವಿಚಾರ ಬಂದಾಗ ಪ್ರಸ್ತಾಪ ಮಾಡೋಣ. ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದಂ ಮೇರಿಟ್ಸ್ ಮೇಲೆ ಕನಸಿಡರ್ ಮಾಡೋಣ. ಇಷ್ಟು ವಿಚಾರ ತಿಳಿಸಿದ್ದಾರೆ.

ಕೋಡ ಆಫ್ ಕಾಂಡಕ್ಟ್ ಆಫ್ ಮಿನಿಸ್ಟರ್ಸ್, ಅದನ್ನು ನಾವು ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ನಾವು ಒಂದು ಕೋಡ ಅನುಸರಿಸುತ್ತಿದ್ದೇವೆ.

ಶ್ರೀ ವಾಟಳ್ ನಾಗರಾಜ್: ನಮಗೊಂದು ಕಾಪಿ ಕೊಡಿ.

ಶ್ರೀ ದೇವರಾಜ ಅರಸ: ಕೊಡೋಣ.

SRI M. S. KRISHNAN:—One more issue I would like to bring to tht notice of the Chief Minister in regarding pollution of air in tha place. Unfortunately your officers are not conducting any enquiry and whatever they do is agreed to.

SRI D. DEVARAJ URS:—I would request that such an allegation and be brought in some other form. Let it be brought in a different manner. How can I answer it now?

SRI M. S. KRISHNAN:—It has been already mentioned. I will again give it in writing.

ಶ್ರೀ ದೇವರಾಜ ಅರಸ. ಯಾರೂ ನೋಡುತ್ತಿಲ್ಲವೆಂದು ಹೇಳಿದರು. ಗೊತ್ತಿಲ್ಲದೆ ಸುಮನೆ ಹೇಳಿದರೆ ಹೇಗೆ ? ಎಂದರೆ ದೇಶದಲ್ಲಿ ಕೆಲಸ ಮಾಡುವವರೆಲ್ಲಾ ಕೆಟ್ಟುಹೋಗಿದ್ದಾರೆ ಅವರು ಮಾತ್ರ ಸರಿಯಾಗಿದ್ದಾರೆ ಎಂದು ಹೇಳಿದ ಹಾಗಾಯ್ತು. ಅವರಿಗೆ ಟೆಕ್ನಿಕಲ್ ಅಸೆಪೆಕ್ಟ ಗೊತ್ತು ಎಕ್ಸ್‌ಪರ್ಟ್ಸ್ ಟೆಕ್ನಿಕಲ್ ರಿಪೋರ್ಟ್ ಕೊಡುವರು. ಸಂಬಂಧಪಟ್ಟ ಅಧಿಕಾರಿ ಇದ್ದಾರೆ- ವರದಿ ಏನಿದೆ ಎಂದು ನೋಡಿ ತಾನೆ ಹೇಳಬೇಕು. ಕೈಗಾರಿಕೆಗಳನ್ನು ಎಲ್ಲಿ ಪ್ರಾರಂಭಿಸಬೇಕು ಎಲ್ಲಿ ಪ್ರಾರಂಭಿಸಬಾರದು ಎಂದು ಅವರು ತಿಳಿಸುವರು. ಒಂದು ಕಡೆ ರಿಮೆಂಟ್ ಫ್ಯಾಕ್ಟರಿಯಾಗಬೇಕು. ನಾಲ್ಕನೆ ಯೋಜನೆ ವಿಚಾರ ಓದಿದರೆ ಅರ್ಥವಾಗುವುದು. ಇದಕ್ಕೆ ಬೇರೊಂದು ಪ್ರಶ್ನೆ ಹಾಕಿದರೆ ಉತ್ತರ ಹೇಳೋಣ. ಲೋಪವಿದ್ದರೆ ತೋರಿಸಿ. ಅದನ್ನು ಸರಿಪಡಿಸೋಣ.

3 P.M.

MADAM SPEAKER : Now we shall teke up Legislative Business. Before that, I have an annoncement to make. The Governer has recommended that the Mysose Contingency Fund (Amendment) Bill, 1972 be introduced in the Mysore Legislative Assembly. Now, I call upon the Hon. Minister for Finance to introduce the Bill.

Mysore Contingency Fund (Amendment) Bill 1972 Introduction.—

SRI M. Y. GHORPADE (Minister for Finance) : I beg to introduce :

" The Mysore Contingeney Fund (Amendment) Bill, 1972."

(i) Mysore Ownership Flats (Regulation of Promotion of Construction Sale, Managements, and Transfer Bill 1972

MADAM SPEALER The Bill is intrduced.

(ii) Mysore Apartment Ownership Bill 1972-Motion to Consider the Bills

MADAM SPEAKER :— Now, the Hon. Minister for Municipal Administration to move the Bills for consideration.